

# ಕದಪಿನ ರಂಗು

■ ವಸುಂಧರಾ ಕದಲೂರು
ಕಲೆ: ಈಶ್ವರ ಬಡಿಗೇರ

'ಅಯ್ಯೋ... ಅಯ್ಯಯ್ಯೋ...' ಎದೆ ಒಡೆಯೋವಂಗೆ ಕೇಳಿ ಬಂದ ಸದ್ದಿಗೆ ಆ ಮನೆಯಲ್ಲಿ ಅಲ್ಲಲ್ಲಿ ಆಗತಾನೆ ಮಲಗಿದ್ದವರು, ಮಲಗಲು ತಯಾರಾಗ್ತಿದ್ದವರೆಲ್ಲಾ ಗಾಬರಿಬಿದ್ದು ನಡುಮನೆಗೆ ಓಡ್ಬಂದ್ರು. ಮನೆ ಒಳಗಿನ ಹಜಾರದಲ್ಲಿ ಬಂದು ನಿಂತವರ ತಲೆ ಮೇಲೆ ದಪ್ಪ ತೊಲೆಗಳ ಅಟ್ಟ. ಮನ್ಯಾಗಿನ ಮನುಷ್ಯರೆಲ್ಲಾ ಆ ಸರೊತ್ತಲ್ಲಿ ಎದ್ದು ಬಂದ ಸದ್ದಿಗೆ ಅಟ್ಟದ ಮೇಲಿದ್ದ ಇಲಿಗಳು ಬಿಲ ಸೇರಲು ಗಡಿಬಿಡಿಯಲ್ಲಿ ಓಡಿದಾಗ, ಹಬ್ಬದಡುಗೆಯ ಹಿತ್ತಾಳೆ ತಾಮ್ರದ ದಬರಿ ಸಾಮಾನುಗಳು ತಾವೇ ಬೆಚ್ಚಿ ಬಿದ್ದಂಗೆ ಸದ್ದು ಮಾಡ್ದೋ

ಮೂಡಲ ದಿಕ್ಕಿಗೆ ತಲೆ ಬಾಗಿಲಿದ್ದ ಆ ಎಂಟು ಕಂಬ ಎರಡು ಜಗುಲಿಗಳಿದ್ದ ದೊಡ್ಡ ತೊಟ್ಟಿ ಮನೆ ಬ್ಯಾಡಳ್ಳಿಗೇ ದೊಡ್ಮನೆ. ಮನೆಯೊಳಕ್ಕೆ ನಡುಮಧ್ಯಕ್ಕಿದ್ದ ತೊಟ್ಟಿ ಸುತ್ತಾ ನಾಕು ಮೂಲೆಗೂ ನಾಕು ಕೋಣೆಗಳಿದ್ವು. ಅದರಲ್ಲಿ ಎರಡು ಕೋಣೆಯ ಅರ್ಧಭಾಗ ಉಗ್ರಾಣ ಇನ್ನರ್ಧ ಭಾಗ ಮಲಗೋ ಹಂಗಿದ್ವು. ಉಳಿದೆರಡರಲ್ಲಿ ಒಂದು ದೇವರ ಪೂಜಿಸಲು ಅಡುಗೆ ಪದಾರ್ಥ ಇಡಲು ಉಗ್ರಾಣ ಮಾಡ್ಕಂಡಿದ್ರು. ಅಡುಗೆ ಮನೆ ಹಿಂದ್ಲು ಬಾಗುಲ್ಗೆ ಪಕ್ಕದಲ್ಲಿತ್ತು. ಗೌಡ್ರು ಮನೇಲಿ ಕೋಳಿ–ಮಾಂಸ, ಮೊಟ್ಟೆ ಬೇಯ್ಸೋದು ಸಾಮಾನ್ಯವಾಗಿದ್ರಿಂದ, ಹಿತ್ಲು ಮನೇಲಿ ಒಂದು ಸೌದೆ ಒಲೆಯ ಅಡ್ಗೆಕೋಣೆ ಇತ್ತು. ಕಿರಿಸೊಸೆ ಬಂದ ಹೊಸದ್ರಲ್ಲಿ ಒಳಗಿನ ಭಾಗಕ್ಕಾದಂತೆ ಒಂದು ಸಣ್ಣ ಅಡುಗೆ ಮನೆ ಮಾಡಿಕೊಂಡಿದ್ರು. ಅದರಾಚ್ಗೆ ಒಣಹುಲ್ಲಿನ ಆರು ದೊಡ್ಡದೊಡ್ಡ ಮೆದೆಗಳ ಹಿತ್ಲು, ಹತ್ತು ದನಗಳನ್ನು ಒಟ್ಟಿಗೇ ಕಟ್ಟಬಹುದಾದ ದನದ ಕೊಟ್ಟಿಗೆ. ಗೊನೆ ತುಂಬಿದ ನಾಕಾರು ತೆಂಗಿನ ಮರ, ಸೀಬೆ, ನೆಲ್ಲಿ, ಕರ್ಬೇವು, ಬಾಳೆ, ನುಗ್ಗೆ, ದಾಸ್ವಾಳ ಗಿಡಗಳು ಬೆಳ್ಕಂಡಿದ್ವು.

ಕತೆ ಸುರೂನಾಗೆ, 'ಅಯ್ಯಯ್ಯೋ...' ಅಂತ ಎಗೆ ಒಡೆಯೋವಂಗೆ ಚೀರಿಕೊಂಡವ್ರು ಲಕ್ಷ್ಮಕ್ಕ. ಆ ಮನೆ ಹಿರೀಕ ಕೆಂಚೇಗೌಡರ ಧರ್ಮಪತ್ನಿ.

ಕೆಂಚೇಗೌಡರನ್ನ ಕುಬೇರ ಮೂಲೇಲಿ ಆಕಿದ್ದ ದೊಡ್ಡ ಬೀಟೆ ಮಂಚದ ಮೇಲೆ ಮಲಗಿಸಿದ್ರು. ಅವರ ತಲೆದಸಿಯಲ್ಲಿ ಕೂತಿದ್ದ ಲಕ್ಷ್ಮಕ್ಕ ಮನೆ ಜನ್ವೆಲ್ಲಾ ಓಡಿ ಬರೋವತ್ಗೆ ಸ್ತಬ್ಧವಾಗಿ ಕೂತಿದ್ರು. ವಾರಗಟ್ಲೆ ಉಸ್ರಾಡ್ಕಂಡಿದ್ದ ಕೆಂಚೇಗೌಡ್ರು ಈಗತಾನೆ ಹೆಣವಾಗಿ ಬುಟ್ರು! ಹೆಣದ ಸುತ್ತಾ ನಿಂತ ಜನರ ನಡುವೆ ಗಾಳಿ ಮೆಲ್ಲಗೆ ತೂರಿ ಜಾಗ ಮಾಡ್ಕಂಡು ಸದ್ದು ಮಾಡ್ದೆ ಚಲಿಸ್ತಿತ್ತು. ಮನೆಯವ್ರ ವೇದ್ನೆ ಸುತ್ತಲ ಏರೀನಾ ತಟಾಯಿಸುತ್ತಾ ಇನ್ನೇನು ಕೋಡಿ ಬೀಳಲು ಸಿದ್ಧವಾದ ಕೆರೆಯಂತಿತ್ತು. ಆಗ ಅಲ್ಲಿ ಮೌನ ಬೇಕಿರದಿದ್ರೂ ಲಕ್ಷ್ಮಕ್ಕನ ಸ್ಥಿತಿ ಕಂಡು ಹೆದರಿ ಸಾವಿನ ಅನಂತರದ ಮೊದಲ ಮಾತಿಗೆ ತುಟಿ ಒಡೆಯೋರು ಯಾರೂ ಇರ್ಲಿಲ್ಲ. ಲಕ್ಷ್ಮಕ್ಕ ಚೀರಿಕೊಂಡ ದನಿ ಬಿಟ್ರೆ ಜೋರಾಗಿ ಉಸ್ರು ತಗ್ದು ಸಶಬ್ದ ರೋದಿಸಲು ಯಾರ್ಗೂ ಧೈರ್ಯ ಬರ್ತ್ತಿಲ್ಲ.

ಭಯ..! ಎಲ್ರೂಗೂ ಜೋರಾಗಿ ಅಳೋಕೆ ಲಕ್ಷ್ಮಕ್ಕನ ಭಯ..! ಲಕ್ಷ್ಮಕ್ಕನ ಬಗ್ಗೆ ಗೊತ್ತಾಗದ ಹೊರತು ಅವರ ಭಯಕ್ಕೆ ನಿಮಗೆ ಕಾರಣ ಗೊತ್ತಾಗಲ್ಲ.

ಹದಿನಾರನೇ ವಯಸ್ಗೇ ಕೆಂಚೇಗೌಡ್ರು ಜೊತೆಯಾಗಿ ಬಂದ ಲಕ್ಷ್ಮಿ ಎಲ್ಲಾದ್ಕೂ ಹೊಂದ್ಕೊಂಡು ಗೌಡ್ರುಗೆ ಅನುರೂಪದ ಮಡದಿಯಾಗೋದ್ರು. ಅತೀ ಸಮಾಧಾನಿಯೂ ನೀತಿವಂತನೂ ಆದ ಗಂಡನ ಜೊತೆ ಆ ಮನೆಯಲ್ಲಿ ಹಿರಿದಾಗಿ ಬಾಳಿ ಬೆಳೆಯುತ್ತಾ ಬಂದ ಹದಿನಾರರ ಪುಟ್ಟ ಹುಡುಗಿ ಲಕ್ಷ್ಮಿ, ತನ್ನ ನಡವಳಿಕೆ, ದೊಡ್ತನಗಳಿಂದ ಕ್ರಮೇಣ ಊರ ಜನರ ಬಾಯಲ್ಲಿ ಲಕ್ಷ್ಮಕ್ಕನಾಗಿ, ಲಕ್ಷ್ಮಮ್ಮನೂ ಆಗಿಹೋದದ್ದು ಕಲಿಯೋರ್ಗೆ ಒಂದು ನೀತಿಪಾಠ.

ಇಲ್ಲೀವರೆಗೆ ತಮ್ಮ ನಾಕು ಗಂಡುಮಕ್ಕಳು – ನಾಕು ಸೊಸೆಯಂದ್ರು, ಇಬ್ರು ಹೆಣ್ಮಕ್ಳು – ಇಬ್ರು ಅಳಿಯಂದ್ರು, ಅವರಿಂದ ಹತ್ತಾರು ಮೊಮ್ಮಕ್ಕಳನ್ನು ಕಂಡು, ಅದರ ನಡುವೇ ತನ್ನದೇ ಒಂದೆರಡು ಕರುಳ ಕುಡಿಗಳನ್ನು ಹುಟ್ಟಿದಂತೆಯೇ ಮಣ್ಣಿಗೊಪ್ಪಿಸಿ, ತನ್ನ ಕೈ ತೂಗಿದ ತೊಟ್ಟಿಲಿನ ಕೂಸುಗಳು ಬಿದಿರಿನ ಚಟ್ಟ ಏರಿ ಚಿತೆಯಲ್ಲಿ ಉರಿದು ಭಸ್ಮವಾದ್ದನ್ನು ಕಂಡಿದ್ದ ಸುಮಾರು ಅರವತ್ತೇಳರ ಲಕ್ಷ್ಮಕ್ಕನಿಗೆ ಒಟ್ರಾಶಿ ಬಾಳ ನೋವು–ನಲಿವಿನ ಜೊತೆಗಾರನಂತಿದ್ದ ಗಂಡನ ಸಾವೆಂದರೆ ಶಾಶ್ವತ ದುಃಖ, ಅನಂತ ಶೋಕವಲ್ದೇ ಮತ್ತೇನು?

ಈಗ ಸಾವಿನ ವಶವಾಗಿ ತಣ್ಣಗೆ ಮಲಗಿರುವ ಕೆಂಚೇಗೌಡ ಹಾಗೂ ಅವರ ದುಃಖಿತಪ್ತ ಧರ್ಮಪತ್ನಿ ಲಕ್ಷ್ಮಕ್ಕರಿಗೆ ಬದುಕುಳಿದು ದಕ್ಕಿದ್ದು ಆರು ಮಕ್ಕಳು. ನಾಲ್ಕು ಗಂಡು, ಎರಡು ಹೆಣ್ಣು. ಎಲ್ಲರ್ಗೂ ಮದುವೆಯಾಗಿದ್ದು, ಸಂಸಾರ ವಂದಿಗರಾಗಿರೋ ಅವರು, ತಂತಮ್ಮ ಮಡದಿಮಕ್ಕಳೊಡನೆ ಸಮೃದ್ಧ ಉಣ್ಣುತ್ತಾ ಸಂಪನ್ನರಾಗಿದ್ದಾರೆ. ಈ ಮಕ್ಕಳನ್ನೆಲ್ಲಾ ನೇರ ಮಾಡಲು ತಮಗಿದ್ದ ಮೂರು ಮುಕ್ಕಾಲೆಕರೆ ಬಯಲು ಸೀಮೆಯ ಜಮೀನನ್ನು ಕೆಂಚೇಗೌಡ್ರೂ ಲಕ್ಷ್ಮಕ್ಕ ನಿಭಾಯ್ಸಿದ ಬಗ್ಗೆ ಹೇಳುದ್ರೆ ಬೇರೆಯವ್ರು ಅಚ್ಚರಿಪಟ್ಟಾರು!

ತಮ್ಮ ದೇಹದಾಗಿನ ಜೀವರಸವೆಲ್ಲಾ ಬಸ್ದು ಮಕ್ಕಳನ್ನೆಲ್ಲಾ ದಡಮುಟ್ಟಿಸ್ದ ಜೀವಗಳು ಅವರಿಬ್ರು. 'ಲಕ್ಷ್ಮಕ್ಕನಿಲ್ದೆ ಗೌಡ್ರಿಲ್ಲ, ಗೌಡ್ರಿಲ್ದೆ ಆವಕ್ಕ ಇಲ್ಲ, ಇಬ್ರೂ ಈ ಕಾಲ್ದಲ್ಲಿ ನಾವ್ಕಂಡ ಪಾರ್ವತಿ–ಪರಮೇಸ್ವರರಿದ್ದಂಗೆ' ಅಂತ ಕಾಲದಿಂದ್ಲೂ ಅವ್ರನ್ನ ಕಾಣ್ತಾಬಂದಿದ್ದ ಜನ ಅನ್ನೋರು. ಹಿಂಗಂತಿದ್ದದ್ದೇನೂ ಉತ್ಪ್ರೇಕ್ಷೆ ಅಲ್ಲ ಬುಡಿ.

ಕೆಂಚೇಗೌಡ್ರು ಊರ ಜಮೀನ್ದಾರ ಅಲ್ಲದಿದ್ರೂ, ಅವ್ರ ಪ್ರಾಮಾಣಿಕ ನಡವಳ್ಕೆ ಊರಿನವ್ರ ನಡುವೆ ಅವ್ರುರ್ಗೆ ಹಿರಿತನದ ಗೌರವ ತಂದ್ಕೊಟ್ಟಿತ್ತು.